**<u>ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಸೇಡಂ</u>**

**CC No. 188/2024**

**(ಇಂದು ದಿಃ 13-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

| ಹೆಸರು ಶ್ರೀ/ಶ್ರೀಮತಿ | ಕಾನು | CW-6 | PW-3 |
|---|---|---|---|
| ತಂದೆ/ಗಂಡನ ಹೆಸರು | ಹಣಮ್ಯಾನಾಯಕ ರಾಠೋಡ | | |
| ವಯಸ್ಸು | 43 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸ ಸ್ಥಳ | ಕೋಲಕುಂದಾ, ತಾಃ ಸೆಡೇಂ | | |

**<u>ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭೀಯೋಜಕರಿಂದಃ-</u>**

ನನಗೆ ಚಾಸಾ-1 ರಿಂದ 5 ರವರ ಪರಿಚಯ ಇದೆ. ಆರೋಪಿಗಳ ಪರಿಚಯ ಇದೆ. ಈಗ 3 ವರ್ಷಗಳ ಹಿಂದೆ ಕೋಲಕುಂದಾದ ದೊಡ್ಡ ತಾಂಡದಲ್ಲಿ 4ನೇ ಆರೋಪಿಯ ಮನೆಯ ಹತ್ತಿರ ಸಂಜೆ 06.00 ಗಂಟೆಗೆ ಜಗಳವಾಗಿರುತ್ತದೆ. ಆ ಸಮಯದಲ್ಲಿ ಅನೀಲ್ ಮತ್ತು ಲಕ್ಷ್ಮಣ್ ಇವರಿಗೆ 1 ಮತ್ತು 3 ನೇ ಆರೋಪಿಗಳು ಬಡಿಗೆಯಿಂದ ತಲೆಗೆ ಮತ್ತು ಬೆನ್ನಿಗೆ ಹೊಡೆದಿರುತ್ತಾರೆ. ಅವಾಚ್ಯ ಶಬ್ದಗಳಿಂದೆ ಆರೋಪಿಗಳು ಚಾಸಾ-1 ಮತ್ತು 4 ರವರಿಗೆ ಬೈದಿರುತ್ತಾರೆ. ಆಗ ನಾನು ಮತ್ತು ರಮೇಶ ಜಗಳ ಬಿಡಿಸಿರುತ್ತೇವೆ. ಅನೀಲ್ ಮತ್ತು ಲಕ್ಷ್ಮಣ ಸೇಡಂ ಆಸ್ಪತ್ರೆಗೆ ಹೋಗಿರುತ್ತಾರೆ. ನಂತರ ಅಲ್ಲಿಂದ ಕಲಬುರಗಿಯ ಆಸ್ಪತ್ರೆಗೆ ಹೋಗಿರುತ್ತಾರೆ. ನಾನು ಈ ಬಗ್ಗೆ ಪೊಲೀಸರ ಮುಂದೆ ಹೇಳಿರುತ್ತೇನೆ. ಆ ದಿನ ಆರೋೇಪಿಗಳು ಹೊಡೆಯಲು ಉಪಯೋಗಿಸಿದ ದೊಣ್ಣೆಗ್ಗಳನ್ನು ನೋಡಿದರೆ ಗುರುತಿಸುತ್ತೇನೆ.

**(ಈ ಹಂತದಲ್ಲಿ ಸ.ಸ.ಅ. ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**<u>ಪಾಟೀ ಸವಾಲುಃ- ಸಹಾಯಕ ಸರ್ಕಾರಿ ಅಭೀಯೋಜಕರಿಂದಃ-</u>**

ದಿಃ 25-03-2023 ರಂದು ಗಲಾಟೆ ಆಗಿರುತ್ತದೆ ಎಂದರೆ ಸರಿ. ನಾನು ಮತ್ತು ಶಂಕರ್ ಚೌವಾಣ್ ಅಂಗನವಾಡಿ ಕೇಂದ್ರದ ಹತ್ತಿರ ಮಾತನಾಡುತ್ತಾ ಕುಳಿತ್ತಿದ್ದಾಗ

ಪಾಂಡು ನಾಯಕರವರ ಮನೆಯ ಹತ್ತಿರ ಜಗಳ ಶಬ್ದ ಕೇಳಿ ನಾವು ಅಲ್ಲಿಗೆ ಹೋಗಿರುತ್ತೇವೆ ಎಂದರೆ ಸರಿ. ಪಾಂಡು ನಾಯಕನ ಮಕ್ಕಳಾದ ಗೋವಿಂದ, ಲೋಕೆಶ , ಕೀರು ಮತ್ತು ಮೈನಿಬಾಯಿ ಇವರೆಲ್ಲರೂ ಅಕ್ರಮ ಕೂಟ ಮಾಡಿಕೊಂಡು ಕೈಯಲ್ಲಿ ಬಡಿಗೆಗಳನ್ನು ಹಿಡಿದುಕೊಂಡು ಬಂದಿದ್ದರು ಎಂದರೆ ಸರಿ. ಗೋವಿಂದ ಬಡಿಗೆಯಿಂದ ಅನೀಲ್ ನಿಗೆ ಹೊಡೆದ ರಕ್ತ ಗಾಯಪಡಿಸಿದ ಎಂದರೆ ಸರಿ. ಲೋಕೆಶ ಅನೀಲನ ಬಲಗೈ ಮೊಣಕೈಗೆ ಹೊಡೆದಿರುತ್ತಾನೆ ಎಂದರೆ ಸರಿ. ಕೀರು ಆತನ ಎಡ ಮುಂಗೈ ಹತ್ತಿರ ಮತ್ತು ರಟ್ಟಿಗೆ ಹೊಡೆದಿರುತ್ತಾನೆ ಎಂದರೆ ಸರಿ. ಬಿಡಿಸಲು ಹೋದ ಲಕ್ಷ್ಮಣ ಇತನಿಗೆ ಪಾಂಡು ನಾಯಕ ತನ್ನ ಮಗನ ಕೈಯಲ್ಲಿದ್ದ ಬಡಿಗೆ ತೆಗೆದುಕೊಂಡು ಅವಾಚ್ಯ ಶಬ್ದಗಳಿಂದ ಬೈಯುತ್ತಾ ಲಕ್ಷ್ಮಣರವರಿಗೆ ಹೊಡೆಯಲು ಹೋಗಿದ್ದು ಲಕ್ಷ್ಮಣ ರವರು ಕೈ ಅಡ್ಡ ಮಾಡಿದ್ದರಿಂದ ಅವರ ಎಡಗೈ ತೋರುಬೇರಳಿಗೆ ಗಾಯವಾಗಿರುತ್ತದೆ ಎಂದರೆ ಸರಿ. ಮೈನಿಬಾಯಿ ಕೈಯಿಂದ ಅನೀಲ್  ಇತನ ಎದೆಯ ಮೇಲಿನ ಟೀ ಶರ್ಟ ಎಳೆದಾಡಿ ಕೈಯಿಂದ ಹೊಡೆದಿರುತ್ತಾಳೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿರ ಪರ ಶ್ರೀ AM ವಕೀಲರಿಂದಃ**

ಅಂಗನವಾಡಿಯಿಂದ ಘಟನಾ ಸ್ಥಳ 100 ಮೀಟರ್ ಅಂತರದಲ್ಲಿರುತ್ತದೆ. ಅಂಗನವಾಡಿಯಿಂದ ಘಟನಾ ಸ್ಥಳದ ಮದ್ಯದಲ್ಲಿ 4 – 5 ಮನೆಗಳು ಇರುತ್ತವೆ ಎಂದರೆ ಸರಿ.  ಘಟನಾ ಸ್ಥಳದಿಂದ ಅಂಗನವಾಡಿ ಶಾಲೆಯ ಮದ್ಯ ಮನೆಗಳು ಇರುವುದರಿಂದ ಘಟನಾ ಸ್ಥಳದಲ್ಲಿ ನಡೆದಿರುವ ಘಟನೆಯ ಬಗ್ಗೆ ಗೊತ್ತಾಗುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ನಿಖರವಾಗಿ ಯಾರು ಯಾರಿಗೆ ಹೊಡೆದಿರುತ್ತಾರೆ ಎಂಬುದು ಹೇಳಲು ಬರುವುದಿಲ್ಲ ಎಂದರೆ ಸರಿ. ಚಾಸಾ-1 ನನ್ನ ಅಣ್ಣನ ಮಗ ಎಂದರೆ ಸರಿ. ಚಾಸಾ-4 ನನ್ನ ಅಣ್ಣ ಎಂದರೆ ಸರಿ. ಚಾಸಾ-4 ನನ್ನ ಅಣ್ಣನಾಗಿರುವುದರಿಂದ ಚಾಸಾ-1 ನನ್ನ ಅಣ್ಣನ ಮಗನಾಗಿರುವುದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಸೇಡಂ ಸರಕಾರಿ ಆಸ್ಪತ್ರೆಯಲ್ಲಿ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿಗಳು  ಅಕ್ರಮ ಕೂಟ ಕಟ್ಟಿಕೊಂಡು ಬಂದಿರುವುದಿಲ್ಲ ಕೈಯಿಂದಾಗಲಿ ಬಡಿಗೆಯಿಂದಾಗಲಿ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ಅವಾಚ್ಯ ಶಬ್ದಗಳಿಂದ

ಬೈದಿರುವುದಿಲ್ಲ ಮತ್ತು ಪ್ರಾಣ ಬೇದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. M.O.NO.1 ಮತ್ತು 3 ಆರೋಪಿಗಳಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ,**
**ಸೇಡಂ.**